

بسم اللہ الرّحمٰن الرّحیم

ಹಝ್ರತ್ ಪೈಗಂಬರ್(ಸ)ರ ಸರಳ ಜೀವನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23–10–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)

ನಾನು ಹಝ್ರತ್ ಪೈಗಂಬರ್(ಸ)ರ ಸರಳ ಜೀವನದ ಪ್ರಸ್ತಾಪವನ್ನು ಪ್ರಾರಂಭಿಸಿದ್ದೆ. ಹಝ್ರತ್ ಪೈಗಂಬರ್(ಸ)ರ ಸರಳತೆಯ ಒಂದು ರೀತಿಯೆಂದರೆ, ಕೆಲವು ಬಾರಿ ತಮ್ಮ ಅಗತ್ಯ ವಸ್ತುಗಳನ್ನು ಸ್ವತಃ ಮಾರುಕಟ್ಟೆಯಿಂದ ಖರೀದಿಸುತ್ತಿದ್ದರು. ಹಝ್ರತ್ ಅಬೂಹುರೈರಾ(ರ) ವರದಿ ಮಾಡುತ್ತಾರೆ: ಒಂದು ದಿನ ನಾನು ಹಝ್ರತ್ ಪೈಗಂಬರ್(ಸ)ರೊಂದಿಗೆ ಮಾರುಕಟ್ಟೆಗೆ ಹೋದೆ. ಹಝ್ರತ್ ಪೈಗಂಬರ್(ಸ) ಬಟ್ಟೆ ವ್ಯಾಪಾರಿಯ ಬಳಿ ಕುಳಿತರು. ನಂತರ ಹಝ್ರತ್ ಪೈಗಂಬರ್(ಸ) ನಾಲ್ಕು ದಿರ್ಹಮ್‌ಗಳಿಗೆ ಸಡಿಲವಾದ ಪೈಜಾಮಾವನ್ನು ಖರೀದಿಸಿದರು.

ಹಝ್ರತ್ ಆಯಿಶಾ(ರ)ರಿಂದ ವರದಿಯಾಗಿದೆ. ಅವರು ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ನನ್ನ ಬಳಿ ಬಂದರು. ಆ ಸಮಯದಲ್ಲಿ ನನ್ನ ಬಳಿ ಇಬ್ಬರು ಅನ್ಸಾರಿ ಹುಡುಗಿಯರು ಕೆಲವು ಪದ್ಯಗಳನ್ನು ಹಾಡುತ್ತಿದ್ದರು. ಅವರು ವೃತ್ತಿಪರ ಗಾಯಕಿಯರಾಗಿರಲಿಲ್ಲ, ಬದಲಾಗಿ ಅವರು ನನ್ನ ಸ್ನೇಹಿತೆಯರಾಗಿದ್ದರು. ಹಝ್ರತ್ ಅಬೂಬಕರ್(ರ) ಹಾಡಿನ ಧ್ವನಿಯನ್ನು ಕೇಳಿದಾಗ, "ಇದೇನು! ಹಝ್ರತ್ ಪೈಗಂಬರ್(ಸ)ರ ಮನೆಯಲ್ಲಿ ನೀವು ಶೈತಾನನ ಕೊಳಲುಗಳನ್ನು ಹಿಡಿದು ಕುಳಿತಿದ್ದೀರಲ್ಲಾ?" ಎಂದು ಹೇಳಿದರು. ಅದು ಈದ್ ಹಬ್ಬದ ದಿನವಾಗಿತ್ತು. ಹಝ್ರತ್ ಪೈಗಂಬರ್(ಸ) ಇದನ್ನು ಕೇಳಿದಾಗ ಹೀಗೆ ಹೇಳಿದರು: "ಹೇ ಅಬೂಬಕರ್, ಪ್ರತಿಯೊಂದು ಜನಾಂಗಕ್ಕೂ ಈದ್ ಇರುತ್ತದೆ ಮತ್ತು ಇದು ನಮ್ಮ ಈದ್ ಆಗಿದೆ. ಹಾಗಾಗಿ ಅವರು ಹಾಡಲಿ ಮತ್ತು ಅವರನ್ನು ತಡೆಯಬೇಡ".

ಹುಝೂರ್ ಹೇಳಿದರು: ಅದು ಸರಳ ಮತ್ತು ಔಪಚಾರಿಕವಲ್ಲದ ವಾತಾವರಣವಾಗಿತ್ತು. ಯಾವುದೇ ಶಿರ್ಕ್‌ನ ಮಾತು ನಡೆಯುತ್ತಿರಲಿಲ್ಲ. ಆದುದರಿಂದ ಅವರಿಗೆ ಹಾಡಲು ಅನುಮತಿ ಕೊಡಲಾಯಿತು.

ಹಝ್ರತ್ ಪೈಗಂಬರ್(ಸ) ಮಕ್ಕಳ ಬಳಿಯಿಂದ ಹಾದುಹೋಗುವಾಗ ಅವರಿಗೆ ಸಲಾಮ್ ಹೇಳುತ್ತಿದ್ದರು. ಅವರ ತಲೆಯ ಮೇಲೆ ಕೈಯಾಡಿಸುತ್ತಿದ್ದರು. ಅವರಿಗಾಗಿ ಪ್ರಾರ್ಥಿಸುತ್ತಿದ್ದರು. ಯಾರಾದರೂ ಹಝ್ರತ್ ಪೈಗಂಬರ್(ಸ) ಜೊತೆ ಕುಳಿತರೆ, ಅಥವಾ ಯಾವುದಾದರೂ ಅಗತ್ಯಕ್ಕಾಗಿ ನಬಿ(ಸ)ರೊಡನೆ ಮಾತನಾಡಿದರೆ, ಆ ವ್ಯಕ್ತಿ ತಾನಾಗಿಯೇ ಎದ್ದು ಹೋಗುವ ವರೆಗೆ ಹಝ್ರತ್ ಪೈಗಂಬರ್(ಸ) ಆತನೊಂದಿಗೆ ತಾಳ್ಮೆಯಿಂದ ಕುಳಿತಿರುತ್ತಿದ್ದರು. ಈ ಸರಳತೆ ಮತ್ತು ತಾಳ್ಮೆಯು, ಬಂದವನಿಗೆ ತನ್ನ ಮಾತನ್ನು ಆರಾಮವಾಗಿ ಹೇಳಲು ನೆಮ್ಮದಿ ಮತ್ತು ಧೈರ್ಯವನ್ನು ನೀಡುತ್ತಿತ್ತು. ಹಾಗಾಗಿ, ಇದೇ ವಿಧಾನವನ್ನು ನಮ್ಮ ಹುದ್ದೇದಾರರು ಅಳವಡಿಸಿಕೊಳ್ಳಬೇಕು.

ಹಝ್ರತ್ ಇಮಾಮ್ ಹುಸೈನ್(ರ) ವಿವರಿಸುತ್ತಾರೆ: ನಾನು ನನ್ನ ತಂದೆಯವರೊಡನೆ ಹಝ್ರತ್ ಪೈಗಂಬರ್(ಸ)ರ ಸಭೆಯ ಬಗ್ಗೆ ಕೇಳಿದೆ. ಅವರು ಹೀಗೆ ಹೇಳಿದರು: ಹಝ್ರತ್ ಪೈಗಂಬರ್(ಸ) ಏಳುವಾಗ ಮತ್ತು ಕುಳಿತುಕೊಳ್ಳುವಾಗ ದೇವಸ್ಮರಣೆ ಮಾಡುತ್ತಿದ್ದರು, ಯಾವುದಾದರೂ ಕೋಮಿನ ಬಳಿ ಹೋದರೆ ಸಭೆ ಮುಗಿದ ನಂತರ ಅಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಹಝ್ರತ್ ಪೈಗಂಬರ್(ಸ) ಪ್ರತಿಯೊಬ್ಬ ಒಡನಾಡಿಗೂ ಅವನ ಹಕ್ಕನ್ನು ನೀಡುತ್ತಿದ್ದರು, ಇತರರು ತನಗಿಂತ ಹೆಚ್ಚು ಆದರಣೀಯರು ಎಂದು ಯಾರಿಗೂ ಭಾಸವಾಗುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ)ರ ಔದಾರ್ಯ ಮತ್ತು ಉತ್ತಮ ವರ್ತನೆ ಎಲ್ಲರಿಗೂ ಸಮಾನವಾಗಿತ್ತು, ಹಝ್ರತ್ ಪೈಗಂಬರ್(ಸ) ಅವರೆಲ್ಲರಿಗೂ ತಂದೆಯ ಸಮಾನರಾಗಿದ್ದರು.

ಮದೀನಾಕ್ಕೆ ಹಿಜ್ರತ್ ಮಾಡಿದ ಸಮಯದಲ್ಲಿ ಖುಬಾದ ಹೊರಗೆ ಹಝ್ರತ್ ಪೈಗಂಬರ್(ಸ) ಮರದ ಕೆಳಗೆ ಕುಳಿತಿದ್ದಾಗ, ಆ ಸಮಯದಲ್ಲಿ ಮದೀನಾದ ಬಹುತೇಕರಿಗೆ ಹಝ್ರತ್ ಪೈಗಂಬರ್(ಸ)ರ ಮುಖ ಪರಿಚಯವಿರಲಿಲ್ಲ. ಹಝ್ರತ್ ಅಬೂಬಕರ್(ರ)ರನ್ನು ಜನರು ನಬಿ(ಸ) ಎಂದು ಭಾವಿಸುತ್ತಿದ್ದರು ಮತ್ತು ಬಹಳ ಭಕ್ತಿಯಿಂದ ಹಝ್ರತ್ ಅಬೂಬಕರ್(ರ)ರ ಕಡೆಗೆ ಮುಖ ಮಾಡಿ ಕುಳಿತುಕೊಳ್ಳುತ್ತಿದ್ದರು. ಹಝ್ರತ್ ಅಬೂಬಕರ್(ರ) ಇವೆಲ್ಲವನ್ನೂ ನೋಡಿ ತಕ್ಷಣವೇ ತಮ್ಮ ಚಾದರವನ್ನು ಎತ್ತಿಕೊಂಡು ಸೂರ್ಯನ ಬಿಸಿಲು ಬರುವ ದಿಕ್ಕಿನಲ್ಲಿ ನಿಂತರು ಮತ್ತು ಹೀಗೆ ಹೇಳಿದರು: "ಯಾ ರಸೂಲಲ್ಲಾಹ್(ಸ), ನಿಮ್ಮ ಮೇಲೆ ಬಿಸಿಲು ಬೀಳುತ್ತಿದೆ. ನಾನು ನಿಮಗೆ ನೆರಳು ನೀಡುತ್ತೇನೆ"

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ಹೇಳುತ್ತಾರೆ: ಒಮ್ಮೆ ನಾನು ಕಾಯಿಲೆ ಬಿದ್ದಿದ್ದೆ, ಆಗ ನಬಿ(ಸ) ಮತ್ತು ಹಝ್ರತ್ ಅಬೂಬಕರ್(ರ) ನನ್ನ ಮನೆಗೆ ಬಂದರು. ಅವರು ನನ್ನನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಕಂಡರು. ನಬಿ(ಸ) ವುಝೂ ಮಾಡಿದರು ಮತ್ತು ಆ ವುಝೂವಿನ ನೀರನ್ನು ನನ್ನ ಮೇಲೆ ಕೊಡವಿದಾಗ ನನಗೆ ಪ್ರಜ್ಞೆ ಬಂತು.

ಹಝ್ರತ್ ಪೈಗಂಬರ್(ಸ)ರ ಜೀವನದಲ್ಲಿ ಯಾವುದೇ ತೋರಿಕೆ ಇರಲಿಲ್ಲ, ಸರಳತೆಯಿತ್ತು. ಹಝ್ರತ್ ಸಹಾಬಿಯರ ಸುಧಾರಣೆಗಾಗಿ ಹಝ್ರತ್ ಪೈಗಂಬರ್(ಸ) ಅವರೊಡನೆ ಸಹ ಸರಳತೆಯನ್ನು ಅಳವಡಿಸಿಕೊಳ್ಳಲು ಉಪದೇಶಿಸುತ್ತಿದ್ದರು.

ಹಝ್ರತ್ ಅಬ್ದುಲ್ಲಾಹ್ ಬಿನ್ ಮಸೂದ್(ರ) ವಿವರಿಸುತ್ತಾರೆ: ಬದ್ರ್ ಯುದ್ಧದ ದಿನ ಮೂರು ಜನರು ಸರದಿಯ ಪ್ರಕಾರ ಒಂದು ಒಂಟೆಯ ಮೇಲೆ ಸವಾರಿ ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಜೊತೆ ಸವಾರಿ ಮಾಡುವವರು ಹೇಳಿದರು: "ಯಾ ರಸೂಲಲ್ಲಾಹ್(ಸ), ನೀವು ಸವಾರಿ ಮಾಡಿ ಮತ್ತು ನಾವು ನಡೆಯುತ್ತೇವೆ". ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ನೀವಿಬ್ಬರು ನನಗಿಂತ ಹೆಚ್ಚು ಶಕ್ತಿಶಾಲಿಗಳಲ್ಲ ಮತ್ತು ನಿಮ್ಮ ಹಾಗೆ ನನಗೂ ಅಲ್ಲಾಹನ ಪ್ರತಿಫಲದ ಅಗತ್ಯವಿದೆ. ಆದ್ದರಿಂದ ನಿಗದಿಪಡಿಸಲಾದ ನಿಯಮದಂತೆ ನಡೆಯಿರಿ"

ಹಝ್ರತ್ ಅಮ್ರ್ ಬಿನ್ ಹಾರಿಸ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ತಾವು ಸವಾರಿ ಮಾಡುತ್ತಿದ್ದ ತಮ್ಮ ಬಿಳಿ ಹೇಸರಗತ್ತೆ, ತಮ್ಮ ಆಯುಧಗಳು ಮತ್ತು ಪ್ರಯಾಣಿಕರಿಗಾಗಿ ದಾನ ಮಾಡಿದ್ದ ಒಂದು ಭೂಮಿಯನ್ನು ಹೊರತುಪಡಿಸಿ ಯಾವುದೇ ದೀನಾರ್, ದಿರ್ಹಮ್, ಗುಲಾಮ ಅಥವಾ ದಾಸಿಯನ್ನು ಬಿಟ್ಟುಹೋಗಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಬಿ(ಸ) ಉತ್ತಮ ಆಹಾರವನ್ನು ಕೂಡ ಸೇವಿಸುತ್ತಿದ್ದರು ಎಂದೂ ಹಝ್ರತ್ ಪೈಗಂಬರ್(ಸ) ಉಪವಾಸ ಮಾಡುತ್ತಿದ್ದರು ಎಂದೂ ತಿಳಿದುಬರುತ್ತದೆ. ಕೆಲವು ಬಾರಿ ಎಷ್ಟೊಂದು ದೀರ್ಘ ಉಪವಾಸ ಮಾಡುತ್ತಿದ್ದರೆಂದರೆ, ಹಝ್ರತ್ ಪೈಗಂಬರ್(ಸ) ತಮ್ಮ ಹೊಟ್ಟೆಯನ್ನು ಕಟ್ಟಿಕೊಳ್ಳಬೇಕಾಗುತ್ತಿತ್ತು. ಆದರೆ ಪ್ರತಿಯೊಂದು ಪರಿಸ್ಥಿತಿಯಲ್ಲೂ ಹಝ್ರತ್ ಪೈಗಂಬರ್(ಸ) ಜೀವನವು ಕೃತಜ್ಞತೆ ಮತ್ತು ಸರಳತೆಯಲ್ಲಿಯೇ ಕಳೆಯಿತು.

ಹಝ್ರತ್ ಅಬೂ ಸಯೀದ್ ಖುದ್ರಿ(ರ) ವಿವರಿಸುತ್ತಾರೆ: ಹಝ್ರತ್ ಪೈಗಂಬರ್(ಸ)ರ ಜೀವನ ಬಹಳ ಸರಳವಾಗಿತ್ತು. ಹಝ್ರತ್ ಪೈಗಂಬರ್(ಸ) ಯಾವುದೇ ಕೆಲಸ ಮಾಡುವುದರಲ್ಲೂ ನಾಚಿಕೆಪಡುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ತಮ್ಮ ಒಂಟೆಗೆ ಸ್ವತಃ ಮೇವು ಹಾಕುತ್ತಿದ್ದರು, ಮನೆಯ ಕೆಲಸಗಳನ್ನು ಮಾಡುತ್ತಿದ್ದರು, ತಮ್ಮ ಚಪ್ಪಲಿಗಳನ್ನು ದುರಸ್ತಿ ಮಾಡುತ್ತಿದ್ದರು, ಬಟ್ಟೆಗೆ ತೇಪೆ ಹಾಕುತ್ತಿದ್ದರು, ಸೇವಕನನ್ನು ತಮ್ಮೊಂದಿಗೆ ಕೂರಿಸಿಕೊಂಡು ಊಟ ಮಾಡಿಸುತ್ತಿದ್ದರು, ಹಿಟ್ಟು ಬೀಸುವಾಗ ಸೇವಕ ಸುಸ್ತಾದರೆ ಆತನಿಗೆ ಸಹಾಯ ಮಾಡುತ್ತಿದ್ದರು. ಮಾರುಕಟ್ಟೆಯಿಂದ ಮನೆಯ ವಸ್ತುಗಳನ್ನು ತರಲು ನಾಚಿಕೆಪಡುತ್ತಿರಲಿಲ್ಲ. ಶ್ರೀಮಂತ–ಬಡವ ಪ್ರತಿಯೊಬ್ಬರೊಂದಿಗೂ ಹಸ್ತಲಾಘವ ಮಾಡುತ್ತಿದ್ದರು, ಸಲಾಮ್ ಮಾಡುವಲ್ಲಿ ಮುಂಚೂಣಿಯಲ್ಲಿದ್ದರು, ಯಾರಾದರೂ ಖರ್ಜೂರ ತಿನ್ನಲು ಆಮಂತ್ರಣ ನೀಡಿದರೂ ಹಝ್ರತ್ ಪೈಗಂಬರ್(ಸ) ಅದನ್ನು ಕೀಳಾಗಿ ಪರಿಗಣಿಸುತ್ತಿರಲಿಲ್ಲ ಮತ್ತು ಅದನ್ನು ಸ್ವೀಕರಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ) ಅತ್ಯಂತ ಸಹಾನುಭೂತಿಯುಳ್ಳ, ಸೌಮ್ಯ ಸ್ವಭಾವದ ಮತ್ತು ತಾಳ್ಮೆಯುಳ್ಳ ವ್ಯಕ್ತಿಯಾಗಿದ್ದರು. ಹಝ್ರತ್ ಪೈಗಂಬರ್(ಸ)ರ ಜೀವನ ಶೈಲಿಯು ಅತ್ಯಂತ ಸರಳವಾಗಿತ್ತು, ಅವರು ಹಸನ್ಮುಖರಾಗಿ ವರ್ತಿಸುತ್ತಿದ್ದರು, ಮುಗುಳ್ನಗೆ ಅವರ ಮುಖದಲ್ಲಿ ಸದಾ ಇರುತ್ತಿತ್ತು. ಹಝ್ರತ್ ಪೈಗಂಬರ್(ಸ) ಜೋರಾಗಿ ನಗುತ್ತಿರಲಿಲ್ಲ. ದೇವನ ಭಯದಿಂದ ಚಿಂತಿತರಾಗಿರುತ್ತಿದ್ದರು, ಆದರೆ ಕಠೋರತೆ ಮತ್ತು ಕಠಿಣತೆ ಅಲ್ಪ ಕೂಡ ಇರಲಿಲ್ಲ. ವಿನಮ್ರ ಸ್ವಭಾವದವರಾಗಿದ್ದರು, ಆದರೆ ಇದರಲ್ಲಿ ಯಾವುದೇ ದೌರ್ಬಲ್ಯ ಮತ್ತು ಹೇಡಿತನದ ಅಂಶ ಕೂಡ ಇರಲಿಲ್ಲ. ಅತ್ಯಂತ ಉದಾರ, ಮೃದು–ಹೃದಯಿ ಮತ್ತು ಕರುಣಾಮಯಿಯಾಗಿದ್ದರು. ಪ್ರತಿಯೊಬ್ಬ ಮುಸಲ್ಮಾನನೊಂದಿಗೂ ದಯೆಯಿಂದ ವರ್ತಿಸುತ್ತಿದ್ದರು. ತೇಗುವಷ್ಟು ಹೊಟ್ಟೆತುಂಬಾ ತಿನ್ನುತ್ತಿರಲಿಲ್ಲ. ದುರಾಸೆ ಮತ್ತು ಆಮಿಷದಿಂದ ಎಂದಿಗೂ ಕೈಚಾಚುತ್ತಿರಲಿಲ್ಲ, ಬದಲಾಗಿ ತಾಳ್ಮೆ ಮತ್ತು ಕೃತಜ್ಞತೆಯಿಂದ ಇದ್ದರು ಹಾಗೂ ಇದ್ದುದರಲ್ಲೇ ತೃಪ್ತರಾಗಿದ್ದರು. ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಉಡುಗೊರೆಯನ್ನು ಸ್ವೀಕರಿಸುತ್ತಿದ್ದರು ಮತ್ತು ಸ್ವತಃ ಉಡುಗೊರೆ ಕಳುಹಿಸುತ್ತಿದ್ದರು. ಚಿಕ್ಕ ಉಡುಗೊರೆಯಾಗಿದ್ದರೂ ಹಝ್ರತ್ ಪೈಗಂಬರ್(ಸ) ಸ್ವೀಕರಿಸುತ್ತಿದ್ದರು

ಮತ್ತು ಅದಕ್ಕೆ ಪ್ರತಿಯಾಗಿ ಉಡುಗೊರೆ ನೀಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಎಂದಿಗೂ ಯಾವುದೇ ಆಹಾರವನ್ನು ಕೆಟ್ಟದ್ದೆಂದು ಹೇಳುತ್ತಿರಲಿಲ್ಲ. ಇಷ್ಟವಾದರೆ ತಿನ್ನುತ್ತಿದ್ದರು, ಇಲ್ಲದಿದ್ದರೆ ಬಿಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಒರಟಾದ ಉಣ್ಣೆಯ ಬಟ್ಟೆ ಧರಿಸಿದರು, ದುರಸ್ತಿ ಮಾಡಿದ ಚಪ್ಪಲಿಗಳನ್ನು ಧರಿಸಿದರು. ನೀರಿನಿಲ್ಲದೆ ಗಂಟಲಿನಿಂದ ಕೆಳಗಿಳಿಯದ ಬಾರ್ಲಿಯ ಒರಟು ರೊಟ್ಟಿಯನ್ನು ಹಝ್ರತ್ ಪೈಗಂಬರ್(ಸ) ಸದಾ ಸೇವಿಸಿದರು ಮತ್ತು ಸರಳ ಉಡುಪು ಧರಿಸಿದರು.

ಹಝ್ರತ್ ಪೈಗಂಬರ್(ಸ) ತಮ್ಮ ರಕ್ಷಾಕವಚವನ್ನು ಬಾರ್ಲಿಗಾಗಿ ಅಡಮಾನ ಇಟ್ಟಿದ್ದರು. ಹಝ್ರತ್ ಪೈಗಂಬರ್(ಸ) ಒಮ್ಮೆ ರೊಟ್ಟಿಯ ತುಂಡಿನ ಮೇಲೆ ಖರ್ಜೂರವನ್ನು ಇಟ್ಟು, **"ಇದು ಇದರ ಪದಾರ್ಥ"** ಎಂದು ಹೇಳಿದರು. ಹೀಗೆ ಖರ್ಜೂರದೊಂದಿಗೆ ರೊಟ್ಟಿಯನ್ನು ತಿಂದರು. ಹಝ್ರತ್ ಪೈಗಂಬರ್(ಸ) ಬಳಿ ಒಮ್ಮೆ ಬಿಸಿ ಊಟವನ್ನು ತರಲಾಯಿತು. ಹಝ್ರತ್ ಪೈಗಂಬರ್(ಸ) ಅದನ್ನು ತಿಂದರು ಮತ್ತು ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು. ಅವರು ಒಂದು ದೀರ್ಘ ಸಮಯದಿಂದ ಬಿಸಿ ಊಟ ತಿಂದಿರಲಿಲ್ಲ. ಹಝ್ರತ್ ಆಯಿಶಾ(ರ) ಹೇಳುತ್ತಾರೆ: ನಾವು ಖರ್ಜೂರ ಮತ್ತು ನೀರನ್ನು ಹೊಟ್ಟೆತುಂಬಾ ಕುಡಿಯುತ್ತಿದ್ದ ಸಮಯದಲ್ಲಿ ನಬಿ(ಸ) ನಿಧನರಾದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮಹಾತ್ಮರು ಮತ್ತು ಪರಿಶುದ್ಧ ಜನರು ಹೊಟ್ಟೆತುಂಬಾ ತಿನ್ನುವುದು ಎಂದರೆ, ಅದು ಅಲ್ಲಾಹನು ಯಾರ ಬಗ್ಗೆ 'ಅವರು ಪ್ರಾಣಿಗಳಂತೆ ತಿನ್ನುತ್ತಾರೆ ಮತ್ತು ಬೆಂಕಿಯೇ ಅವರ ನೆಲೆ' ಎಂದು ಹೇಳಿದ್ದಾನೋ ಅಂತಹವರು ಹೊಟ್ಟೆತುಂಬಾ ತಿನ್ನುವ ರೀತಿಯಲ್ಲಿ ಅಲ್ಲ. ಹಝ್ರತ್ ಪೈಗಂಬರ್(ಸ)ರ ಯಾವಾಗಲಾದರೂ ಹೊಟ್ಟೆತುಂಬಾ ತಿನ್ನುವುದು ಎಂಬುದು ಬೇರೆಯದೇ ರೀತಿಯಲ್ಲಿ ಆಗಿದೆ. ಆ ಹೊಟ್ಟೆತುಂಬುವಿಕೆಯನ್ನು, ಜೀವನದ ನೈಜ ಉದ್ದೇಶವೇ ಆನಂದ ಎಂದು ಭಾವಿಸಿರುವವರಿಗೆ ಮತ್ತು ದೃಷ್ಟಿ ಕೇವಲ ಐಹಿಕ ಆಸೆಗಳಿಗೆ ಸೀಮಿತವಾಗಿರುವವರಿಗೆ ಹೋಲಿಸಿದರೆ, ಆ ಹೊಟ್ಟೆತುಂಬುವಿಕೆಯನ್ನು ನಾವು ಎಂದಿಗೂ ಹೊಟ್ಟೆತುಂಬಾ ತಿಂದದ್ದು ಎಂದು ಕರೆಯಲು ಸಾಧ್ಯವಿಲ್ಲ. ಹೊಟ್ಟೆತುಂಬಾ ತಿಂದದ್ದು ಎಂಬುದರ ವ್ಯಾಖ್ಯಾನದಲ್ಲಿ, ಪವಿತ್ರರು ಮತ್ತು ಪರಿಶುದ್ಧಾತ್ಮರ ಪರಿಭಾಷೆ ಹಾಗೂ ಅಪವಿತ್ರರು ಮತ್ತು ಹೊಟ್ಟೆಬಾಕರ ಪರಿಭಾಷೆಯು ಬೇರೆ ಬೇರೆಯಾಗಿದೆ. ಹಸಿವು ನೀಗಲು ಮತ್ತು ಚಲನವಲನಗಳಿಗೆ ಶಕ್ತಿ ಲಭಿಸಲು ಎಷ್ಟು ಆಹಾರ ಬೇಕೋ, ಅಷ್ಟನ್ನೇ ಹೊಟ್ಟೆತುಂಬಾ ತಿನ್ನುವುದು ಎಂದು ಪವಿತ್ರ ಜನರು ಕರೆಯುತ್ತಾರೆ. ಒಟ್ಟಿನಲ್ಲಿ, ಸತ್ಯವಿಶ್ವಾಸಿಯ ಹೊಟ್ಟೆತುಂಬುವಿಕೆಯು ಏನೆಂದರೆ, ತನ್ನ ಬೆನ್ನನ್ನು ನೆಟ್ಟಗಿಡಲು ಮತ್ತು ಕರ್ತವ್ಯಗಳನ್ನು ಪೂರೈಸಲು ಬೇಕಾಗುವಷ್ಟು ಆಹಾರವನ್ನು ಸೇವಿಸುವುದಾಗಿದೆ. ಹಾಗಾಗಿ, ಹಝ್ರತ್ ಪೈಗಂಬರ್(ಸ)ರ ಹೊಟ್ಟೆತುಂಬುವಿಕೆಯನ್ನು ಸಾಮಾನ್ಯ ಜನರ ಹೊಟ್ಟೆತುಂಬುವಿಕೆಗೆ ಹೋಲಿಸುವುದು ಅರ್ಥಹೀನವಾಗಿದೆ. ಇದೇ ರೀತಿ ಅನೇಕರು ಹಝ್ರತ್ ಪೈಗಂಬರ್(ಸ)ರ ಶ್ರೇಷ್ಠತೆಯನ್ನು ಮನವರಿಕೆ ಮಾಡಿಕೊಂಡಿಲ್ಲ ಮತ್ತು ಪದಗಳ ಬಳಕೆಯ ಸಂದರ್ಭವನ್ನು ಗಮನಿಸದೆ ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. ಹಝ್ರತ್ ಪೈಗಂಬರ್(ಸ) ಎಂದಾದರೂ, 'ನಾನು ಹೊಟ್ಟೆತುಂಬಾ ತಿಂದೆ' ಎಂದು ಹೇಳಿದರೆ, ಅದು ಜೀವನದ ನೈಜ ಉದ್ದೇಶ ಕೇವಲ ತಿನ್ನುವುದೇ ಎಂದು ಭಾವಿಸಿರುವವರ ಅರ್ಥದಲ್ಲಿ ಖಂಡಿತವಾಗಿಯೂ ಅಲ್ಲ. ಒಟ್ಟಿನಲ್ಲಿ, ಪವಿತ್ರರ ಕಾರ್ಯ ಮತ್ತು ಮಾತುಗಳನ್ನು ಪವಿತ್ರರ ಉನ್ನತ ಸ್ಥಾನಮಾನಗಳಿಗೆ ಅನುಗುಣವಾಗಿ ಅರ್ಥಮಾಡಿಕೊಳ್ಳಬೇಕು. ಅವರ ವಿಷಯಗಳನ್ನು ಇತರರಿಗೆ ಹೋಲಿಸುವುದು ಸರಿಯಲ್ಲ. ವಾಸ್ತವದಲ್ಲಿ ಅವರು ಈ ಲೋಕದಲ್ಲಿರುವಂತೆ ಕಂಡರೂ, ಅವರು ಈ ಲೋಕದಿಂದ ಹೊರಗಿರುತ್ತಾರೆ.

ಹಝ್ರತ್ ಆಯಿಶಾ(ರ) ಹೇಳುತ್ತಾರೆ: ನಾನು ದಿನಕ್ಕೆ ಎರಡು ಬಾರಿ ಹೊಟ್ಟೆತುಂಬಾ ತಿಂದಾಗಲೆಲ್ಲಾ ನನಗೆ ಅಳು ಬರುತ್ತದೆ. 'ಯಾಕೆ ಅಳು ಬರುತ್ತದೆ?' ಎಂದು ಕೇಳಲಾದಾಗ ಅವರು ಹೇಳಿದರು: **"ನನಗೆ ಹಝ್ರತ್ ಪೈಗಂಬರ್(ಸ) ಲೋಕವನ್ನು ತ್ಯಜಿಸುವಾಗ ಇದ್ದ ಸ್ಥಿತಿ ನೆನಪಾಗುತ್ತದೆ".** ದೇವನಾಣೆ! ಹಝ್ರತ್ ಪೈಗಂಬರ್(ಸ) ಎಂದಿಗೂ ಒಂದು ದಿನದಲ್ಲಿ ಎರಡು ಬಾರಿ ರೊಟ್ಟಿ ಮತ್ತು ಮಾಂಸವನ್ನು ಹೊಟ್ಟೆತುಂಬಾ ತಿಂದಿಲ್ಲ.

ಹಝ್ರತ್ ಅಬ್ದುಲ್ಲಾಹ್ ಬಿನ್ ಉಬೈದ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ)ರ ಬಳಿ ಊಟವನ್ನು ತರಲಾಯಿತು. ಹಝ್ರತ್ ಆಯಿಶಾ(ರ) ಹೇಳಿದರು: **"ಅಲ್ಲಾಹನ ಪ್ರವಾದಿಯೇ(ಸ), ನೀವು ಒರಗಿಕೊಂಡು ತಿನ್ನಿ, ಇದು ನಿಮಗೆ ಹೆಚ್ಚು ಆರಾಮದಾಯಕವಾಗಿರುವುದು."** ಹಝ್ರತ್ ಪೈಗಂಬರ್(ಸ) ತಮ್ಮ ಹಣೆಯನ್ನು ನೆಲದ ಕಡೆಗೆ ಎಷ್ಟು ಬಗ್ಗಿಸಿದರೆಂದರೆ, ಅದು ನೆಲವನ್ನು ಮುಟ್ಟುವಂತೆ ಇತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: **"ನಾನಂತೂ ಸಾಮಾನ್ಯ ವ್ಯಕ್ತಿ ತಿನ್ನುವಂತೆಯೇ ತಿನ್ನುತ್ತೇನೆ ಮತ್ತು ಸಾಮಾನ್ಯ ವ್ಯಕ್ತಿ ಕುಳಿತುಕೊಳ್ಳುವಂತೆಯೇ ಕುಳಿತುಕೊಳ್ಳುತ್ತೇನೆ, ಏಕೆಂದರೆ ನಾನು ಕೇವಲ ಒಬ್ಬ ದಾಸನಾಗಿದ್ದೇನೆ."**

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಅತ್ಯಂತ ಪ್ರಭಾವಶಾಲಿಯಾಗಿದ್ದರೂ, ಎಷ್ಟೊಂದು ಉತ್ತಮ ನೈತಿಕ ಸ್ವಭಾವವನ್ನು ಹೊಂದಿದ್ದರು ಎಂದು ಹಝ್ರತ್ ಪೈಗಂಬರ್(ಸ)ರ ಪವಿತ್ರ ಜೀವನವನ್ನು

ಅಧ್ಯಯನ ಮಾಡಿದರೆ ನಿಮಗೆ ತಿಳಿಯುವುದು. ಓರ್ವ ವೃದ್ಧ ಮಹಿಳೆ ನಬಿ(ಸ)ರನ್ನು ನಿಲ್ಲಿಸಿದರೆ ಕೂಡ ಆಕೆ ಅನುಮತಿ ನೀಡುವ ವರೆಗೂ ಅವರು ಅಲ್ಲೇ ನಿಂತಿರುತ್ತಿದ್ದರು.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ)ರ ಸ್ಥಾನವು ಅತ್ಯುನ್ನತವಾಗಿದೆ ಮತ್ತು ಅವರ ಪ್ರತಿಯೊಂದು ಕಾರ್ಯದಲ್ಲೂ ಒಂದು ಉತ್ತಮ ಮಾದರಿ ಇದೆ. **ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್ ಇನ್ನಕ ಹಮೀದುಮ್ಮಜೀದ್.**

————————*****————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ oاُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

Friday Sermon delivered by Hadrath Khaleefatul Masih Al Khamis(atba)

At, ***'Masjid Mubarak',*** *Islamabad, Tilford,* U.K. On 23-10-2026

Summarized by *Majlis Ansarullah Bharat*

Kannada Translation: Moulavi Inamullah for Kannada Desk, Qadian

Published By: Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

You can find all the Sermons archived at: www.alislam.org/friday-sermon